ಒಬ್ಬ ಉಪಾಧ್ಯಾಯನಿಗೆ ಪಾಠ ಹೇಳುವುದು ಸುಲಭವಲ್ಲ. ಅದು ಬಹಳ ಕಷ್ಟಕರವಾದ ಕೆಲಸವಾಗಿರುತ್ತದಲ್ಲವೇ ? ಆದರಿಂದ ವಿದ್ಯಾಭ್ಯಾಸದ ಗುಣಮಟ್ಟ ಕಡಿಮೆಯಾಗುತ್ತದೆ ಎಂಬುದಾಗಿ ನಮ್ಮೆಲ್ಲರ ಅಭಿಪ್ರಾಯವಾಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಪುನರ್ಪರಿಶೀಲನೆ ಮಾಡಿ ಈ ರೀತಿ ಎಲ್ಲೆಲ್ಲ ಏಕೋಪಾಧ್ಯಾಯ ಶಾಲೆಗಳು ಇರುತ್ತವೋ ಅಲ್ಲೆಲ್ಲಾ ಕಡ್ಡಾಯವಾಗಿ ಅದನ್ನು ಇಡೀ ದೇಶದಲ್ಲಿ ತಪ್ಪಿಸುವ ಪ್ರಯತ್ನಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಎಲ್ಲಿ ಮಕ್ಕಳ ಸಂಖ್ಯೆ 40ಕ್ಕಿಂತ ಜಾಸ್ತಿ ಇರುತ್ತದೋ ಅಂತಹ ಕಡೆಗಳಲ್ಲಿ ಇನ್ನೊಬ್ಬ ಉಪಾಧ್ಯಾಯರನ್ನು ನೇಮಕಮಾಡುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ,—ಏಕೋಪಾಧ್ಯಾಯರು ಇರತಕ್ಕ ಶಾಲೆಗಳಲ್ಲಿ ಒಂದುವೇಳೆ ಆ ಉಪಾಧ್ಯಾಯರಿಗೆ ಏನಾದರೂ ಕಾಯಿಲೆ ಬಂದೋ ಅಥವಾ ಇನ್ನಾವ ಕಾರಣದಿಂದಲೋ 3-4 ತಿಂಗಳು ರಜ ತೆಗೆದುಕೊಂಡರೆ, ಅಂತಹ ಸಂದರ್ಭಗಳಲ್ಲಿ ಅಂತಹ ಸ್ಕೂಲುಗಳಿಗೆ ತಕ್ಷಣ ಬೇರೊಬ್ಬ ಉಪಾಧ್ಯಾಯರನ್ನು ನೇಮಕಮಾಡುವಿದ್ದಾರೆ ಅಲ್ಲಿನ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದಲ್ಲವೆ ಮಕ್ಕಳು ಬಹಳವಾಗಿ ಕೆಟ್ಟುಹೋಗುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ರೀತಿ ಬಂದಿದ್ದರೆ, ಅಂಥಾದ್ದನ್ನು ಅವಾಯ್ಡ್ ಮಾಡುವುದಕ್ಕೆ ಏನು ವ್ಯವಸ್ಥೆಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್,—ಏಕೋಪಾಧ್ಯಾಯರು ಇರುವಂತಹ ಸ್ಕೂಲುಗಳಲ್ಲಿ ಒಂದು ವೇಳೆ ಆ ರೀತಿ ಆ ಉಪಾಧ್ಯಾಯರು ಆ ರೀತಿಯಾಗಿ ರಜ ತೆಗೆದುಕೊಂಡರೆ, ಅಂತಹ ಸಂದರ್ಭಗಳಲ್ಲಿ 7-8 ಜನ ಉಪಾಧ್ಯಾಯರು ಇರುವಂಥ ಪ್ರೈಮರಿ ಶಾಲೆಗಳಿಂದ ಒಬ್ಬ ಉಪಾಧ್ಯಾಯರನ್ನು ಅಲ್ಲಿಗೆ ಕಳುಹಿಸುವ ಏರ್ಪಾಡು ಇದೆ. ಅದೂ ಅಲ್ಲದೆ ಅಲ್ಲಿಗೆ ಹಾಕಿದಂಥ ಉಪಾಧ್ಯಾಯರು ಬಾರದಿದ್ದರೆ, ಮಕ್ಕಳಿಗೇನಾದರೂ ತೊಂದರೆಯಾಗತಕ್ಕ ಸಂದರ್ಭ ಬಂದರೆ, ಅಂತಹ ಸಂದರ್ಭದಲ್ಲಿ ಆದಷ್ಟು ಮಟ್ಟಿಗೆ ಚಕ್ ವಿಜಿಲೆನ್ಸ್ ಇಟ್ಟುಕೊಂಡು ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸಂಬಂಧ ಪಟ್ಟ ಎಜುಕೇಷನ್ ಆಫೀಸರ್ಸ್‌ಗೆ ಸೂಚನೆ ಕೊಟ್ಟಿದ್ದೇವೆ.

## ESTABLISHMENT OF RESEARCH AND POST GRADUATE MEDICAL INSTITUTION

356. Sri K. R. SRINIVASALU NAIDU (Shanthinagar).—

Will the Minister for Health be pleased to state :—

(*a*) whether there is any research and post-graduate Medical Institution of the type in Delhi, Chandigarh and Pondicherry ;

(b) if not whether there is any proposal to establish such an institution in the State at Bangalore ;

(*c*) if so, the action so far taken by Government in this regard ?

Sri H. SIDDAVEERAPPA (Minister for Health).—

(*a*) Not in Karnataka.

(*b*) Yes.

(*c*) The Government of India has been requested to sanction a sum of Rs. 2 crores for the purpose.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—(ಅ) ಪ್ರಶ್ನೆಗೆ ಉತ್ತರವಾಗಿ ಕರ್ನಾಟಕದಲ್ಲಿಲ್ಲ ಎಂಬುದಾಗಿ ಹೇಳಿದೆ. ಕೇಂದ್ರ ಸರ್ಕಾರದವರು ರೀಜನಲ್ ಫೋರ್ಸ್ ಗ್ರಾಜುಯೇಟ್ ರಿಸರ್ಚ್ ಇನ್‌ಸ್ಟಿಟ್ಯೂಟ್ ತೆಗೆಯಬೇಕೆಂದು ಅವರ ಗಮನದಲ್ಲಿದೆ. ಇದರ ಬಗ್ಗೆ ತಮಗೇನಾದರೂ ಪತ್ರ ವ್ಯವಹಾರ ಬಂದಿದೆಯೇ? (ಇ) ಪ್ರಶ್ನೆಗೆ ಉತ್ತರವಾಗಿ ತಾವು ಕೇಂದ್ರ ಸರ್ಕಾರದವರನ್ನು ಇದಕ್ಕಾಗಿ 2 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಕೇಳಲಾಗಿದೆಯೆಂದು ಹೇಳಿದ್ದೀರಿ. ಇದರ ಬಗ್ಗೆ ತಮ್ಮದೇ ಆದಂಥ ಏನಾದರೂ ಪ್ರಾಜೆಕ್ಟ್ ರಿಪೋರ್ಟ್‌ನ್ನು ತಯಾರುಮಾಡಿದ್ದೀರಾ?

† ಶ್ರೀ ಎಚ್. ಸಿದ್ಧವೀರಪ್ಪ,—ಪ್ರಾಜೆಕ್ಟ್ ರಿಪೋರ್ಟ್‌ನ್ನು ತಯಾರಿಸುವುದಕ್ಕೆ ಹೇಳಿದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು,—ಎರಡು ಕೋಟಿ ರೂಪಾಯಿಗಳನ್ನು ನೀವು ಕೇಳಿದಾಗ, ಪ್ರಾಜೆಕ್ಟ್ ರಿಪೋರ್ಟ್ ಇಲ್ಲದೆ ಅವರು ಅದನ್ನು ಹೇಗೆ ಕೊಡುತ್ತಾರೆ? ನಮ್ಮಲ್ಲಿ ಅದಕ್ಕೆ ಸ್ಥಳಾವಕಾಶ ಮುಂತಾದ ಅನುಕೂಲತೆಗಳು ಇವೆ ಮೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಮತ್ತು ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ಹತ್ತಿರ ಸರ್ಕಾರಕ್ಕೆ ಸೇರಿದ 150 ಎಕರೆ ಜಾಗವಿದೆ. ಅದು ಅನ್ಪತ್ತೆ ಜೋನ್. ಆದ್ದರಿಂದ ಕೇಂದ್ರಸರ್ಕಾರದಿಂದ ಏಕೆ ಆ ರೀತಿಯ ಸಹಾಯವನ್ನು ಪಡೆಯಬಾರದು?

ಶ್ರೀ ಎಚ್. ಸಿದ್ಧವೀರಪ್ಪ,—ನಮ್ಮ ಅಭಿಪ್ರಾಯದಲ್ಲಿ ಬೆಂಗಳೂರು ಸುತ್ತಮುತ್ತಲಿರುವ ಯೂನಿವರ್ಸಿಟಿ ಏರಿಯಾದಲ್ಲಿ ನಾಗರಬಾವಿ ಫಾರೆಸ್ಟ್‌ನಲ್ಲಿ 27ನೇ ಸೆಕ್ಷನಿನಲ್ಲಿ 37 ಎಕರೆ ತೆಗೆದುಕೊಳ್ಳಬೇಕೆಂದು ಮಾಡಿದ್ದರು. ಆದರೆ ಈಗ ಮಾನ್ಯ ಸದಸ್ಯರು ಆಸ್ಪತ್ರೆಯ ಕಾಂಪ್ಲೆಕ್ಸ್‌ನಲ್ಲಿ ಸರ್ಕಾರಕ್ಕೆ ಸೇರಿದ 150 ಚಿಲ್ಲರೆ ಎಕರೆ ಜಮೀನು ಇದೆ ಎಂದು ಹೇಳುತ್ತಿದ್ದಾರೆ. ಇರುವುದರಿಂದ ಅದನ್ನು ಪರಿಶೀಲನೆ ಮಾಡಿ, ಅಲ್ಲಿಯೇ ಅಂತಹ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡುವ ಪರಿಸ್ಥಿತಿ ಇದ್ದಪಕ್ಷದಲ್ಲಿ ಅದನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಎಸ್. ಎಂ. ಶ್ರೀರನಾಳಿ ಚಂದ್ರಶೇಖರ್,—ತಾವು ಇಷ್ಟು ಉತ್ತರದಲ್ಲಿ 2 ಕೋಟಿ ರೂಪಾಯಿಗಳೆಂದು ಹೇಳಿದ್ದೀರಿ. ಈ ಪೊಬಲಗನ್ನು ಕೇಳಿದ್ದು ಯಾವಾಗ? ಅದು ನಮಗೆ ಸಿಕ್ಕುವುದೆಂದು? ಅವರು ಯಾವಾಗ ಕೊಡುತ್ತಾರೆ ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ?

ಶ್ರೀ ಎಚ್. ಸಿದ್ಧವೀರಪ್ಪ,—ನಾವು ಕೇಂದ್ರ ಸರ್ಕಾರಕ್ಕೆ ಇಷ್ಟು ಧನ ಸಹಾಯ ನೀಡಬೇಕು ಎಂದು ಹೇಳಿದ್ದು 1973ನೇ ಇಸವಿ ಆಗಸ್ಟ್ ತಿಂಗಳಲ್ಲಿ. ಅದು ಯಾವಾಗ ಸಿಕ್ಕಿತೆಂಬುದು ಭವಿಷ್ಯದ ಗರ್ಭದಲ್ಲಿ ಅಡಗಿದೆ.

ಶ್ರೀ ಎಂ. ಎಸ್. ಕೃಷ್ಣನ್,—ನಮ್ಮ ರಾಜ್ಯದಲ್ಲಿ ತಾವು ಆರೋಗ್ಯ ಸಚಿವರಾದ ಮೇಲೆ ಇಲ್ಲಿ ಒಂದು ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್‌ನ್ನು ಸ್ಥಾಪಿಸಬೇಕೆಂದು ಹೋರಾಟರತಕ್ಕ ಕಾಲದಲ್ಲಿ ಈ ಒಂದು ಇನ್‌ಸ್ಟಿಟ್ಯೂಟನ್ನು ಇಲ್ಲಿ ಸ್ಥಾಪಿಸುವುದರ ಪ್ರೋನು ತೊಂದರೆಯಿದೆ?

ಶ್ರೀ ಎಚ್. ಸಿದ್ಧವೀರಪ್ಪ.—ತೊಂದರೆಯೇನೂ ಇರುವುದಿಲ್ಲ. ಇರುವುದೆಲ್ಲಾ ಹಣದ ಅಡಚಣೆ. ಅದನ್ನು ಬಿಟ್ಟರೆ ಬೇರೆ ಏನೂ ತೊಂದರೆ ಇಲ್ಲ. ಹಾಗೆ ಹೇಳುವುದಾದರೆ ನಾವು ಕೇಂದ್ರಕ್ಕೆ ದಕ್ಷಿಣ ಭಾರತದಲ್ಲಿ ಇಂಥ ಒಂದು ಇನ್‌ಸ್ಟಿಟ್ಯೂಟನ್ನು ಸ್ಥಾಪನೆ ಮಾಡುವುದಕ್ಕೆ ಬೆಂಗಳೂರು ಬಹಳ ಅನುಕೂಲವಾದ ಸ್ಥಳವೆಂದು ತಿಳಿಸಿರುವುದಲ್ಲದೆ, ಸರ್ಕಾರದವರು ಆ ವಿಚಾರದಲ್ಲಿ ನೆಲ, ಇನ್ನುಳಿದ ಸೌಲಭ್ಯಗಳನ್ನು ಕೊಡುವುದಾಗಿ ತಿಳಿಸಿ ಇದನ್ನು ಇಲ್ಲೇ ಸ್ಥಾಪಿಸುವಂತೆ ಕೇಂದ್ರಕ್ಕೆ ಒತ್ತಾಯ ಹಾಕಿದ್ದೇವೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು,—ಮಾನ್ಯ ಆರೋಗ್ಯ ಸಚಿವರು ಇಲ್ಲಿ ಒಂದು ಮೆಡಿಕಲ್ ಯೂನಿವರ್ಸಿಟಿಯನ್ನು ಸ್ಥಾಪಿಸತಕ್ಕ ಉದ್ದೇಶವಿಟ್ಟುಕೊಂಡಿರುವುದರಿಂದ ಈ ಪೋಸ್ಟ್ ಗ್ರಾಜ್ಯುಯೇಟ್ ಮೆಡಿಕಲ್ ಇನ್‌ಸ್ಟಿಟ್ಯೂಟ್‌ನ್ನು ಮೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಹತ್ತಿರವೇ ಸ್ಥಾಪಿಸುವುದರಿಂದ ಅವರಿಗೆ ಇರತಕ್ಕ ಹಣದ ತೊಂದರೆ ಬೇಗ ನಿವಾರಣೆಯಾಗುವುದಿಲ್ಲವೇ?

ಶ್ರೀ ಎಚ್. ಸಿದ್ಧವೀರಪ್ಪ,—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡೋಣ.

ಅಧ್ಯಕ್ಷರು,—ಪ್ರಶ್ನೆ 383 ಮತ್ತು 422 ಈ ಪ್ರಶ್ನೆಗಳನ್ನು ಮುಂದೂಡಲಾಗಿದೆ. I have received a letter from Hon'ble Minister.